**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುರಾದ ಶ್ರೀ ರುದ್ರೇಗೌಡ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ:-**

**ಪ್ರಸ್ತಾಪ:**

ಸ್ಟಾಂಪ್ ಡ್ಯೂಟಿ ನಾಲ್ಕೈದು ಪಟ್ಟು ಹೆಚ್ಚಳ ವಿವಿಧ ಬಾಂಡ್‌ಗಳಿಗೆ ದುಪ್ಪಟ್ಟು ಮೊತ್ತ ಮತ್ತು ರೈತರಿಗೆ ಹೊರೆಯಾದ ಮುದ್ರಾಂಕ ಶುಲ್ಕ ಏರಿಕೆ ಕುರಿತು.

**ಉತ್ತರ/ಹೇಳಿಕೆ:**

ಕರ್ನಾಟಕ ಮುದ್ರಾಂಕ ಕಾಯ್ದೆ 1957 ರಲ್ಲಿನ ಷೆಡ್ಯೂಲ್‌ನಲ್ಲಿರುವ ಕೆಲವೊಂದು ಅನುಚ್ಛೇದಗಳಿಗೆ ಅಧಿಸೂಚನೆ ಸಂಖ್ಯೆ: DPAL 39 SHASANA 2023, ದಿನಾಂಕ: 03-02-2024 ರನ್ವಯ ತಿದ್ದುಪಡಿಗಳನ್ನು ಜಾರಿಗೆ ತಂದು ಮುದ್ರಾಂಕ ಶುಲ್ಕಗಳನ್ನು ಪರಿಷ್ಕರಿಸಲಾಗಿರುತ್ತದೆ.

ಸದರಿ ತಿದ್ದುಪಡಿಗಳಲ್ಲಿ, ಪ್ರಮುಖವಾಗಿ ನೋಂದಣಿ ಕಡ್ಡಾಯವಲ್ಲದ ದಸ್ತಾವೇಜುಗಳಿಗೆ ಅನ್ವಯಿಸುವ ಮುದ್ರಾಂಕ ಶುಲ್ಕಗಳಾಗಿರುತ್ತವೆ. ಉದಾಹರಣೆಗೆ ಅಫಿಡೆವಿಟ್, ಸ್ವಾಧೀನ ರಹಿತ ಕ್ರಯದ ಕರಾರು, Work Contract Chit ಗಳಿಗೆ ಸಂಬಂಧಿಸಿದ ಕರಾರುಗಳು, ದಾಖಲೆಗಳ ಬತ್ತಿ ಪತ್ರಗಳು (DTD), Copy of Extract. Duplicate Letter of Allotment, Hypothecation, Article of Association, Bond, Bank Guarantee, Certificate of Enrolment, Composition Deed, Memorandum of Association, Partition Deed, Partnership Deed, Power of Attorney, Security Bond ) Trust.

ಸದರಿ ಅನುಚ್ಛೇದಗಳ ಪೈಕಿ ರೈತರ ವ್ಯವಹಾರಗಳಿಗೆ ಸಂಬಂಧಿಸಿದ ದಸ್ತಾವೇಜುಗಳು ಬಹಳ ವಿರಳವಾಗಿರುವುದರಿಂದ ರೈತರಿಗೆ ಇದರಿಂದ ಆರ್ಥಿಕ ಸಂಕಷ್ಟಕ್ಕೆ ಗುರಿ ಮಾಡಿರುವುದಿಲ್ಲ. ರೈತರಿಗೆ ಅನ್ವಯಿಸುವ ಅಫಿಡವಿಟ್ ಪತ್ರಗಳಿಗೆ ಬೇರೆ ರಾಜ್ಯಗಳಾದ ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹೆಚ್ಚು ಮುದ್ರಾಂಕ ಶುಲ್ಕವನ್ನು ನಿಗಧಿಪಡಿಸಿರುತ್ತಾರೆ. ಹಾಗೂ ಕರ್ನಾಟಕ ರಾಜ್ಯದಲ್ಲಿ ಅಫಿಡೆವಿಟ್ ಪತ್ರಗಳಿಗೆ ರೂ.20/-ಗಳ ಮುದ್ರಾಂಕ ಶುಲ್ಕವನ್ನು ಮಾತ್ರ ನಿಗಧಿಪಡಿಸಲಾಗಿರುತ್ತದೆ. ಅಲ್ಲದೇ ಈ ತಿದ್ದುಪಡಿಯಲ್ಲಿರುವ ಅನುಚ್ಛೇದಗಳ ಮುದ್ರಾಂಕ ಶುಲ್ಕಗಳನ್ನು ಸುಮಾರು 15 20 ವರ್ಷಗಳಿಂದ ಪರಿಷ್ಕರಿಸಿರುವುದಿಲ್ಲ. ಆದ್ದರಿಂದ ಮುದ್ರಾಂಕ ಶುಲ್ಕಗಳನ್ನು ಪರಿಷ್ಕರಿಸಲಾಗಿದ್ದು, ಇದು ಕೇಂದ್ರ ಸರ್ಕಾರದ One-Nation One-Stamp ಜಾರಿಗೊಳಿಸಲು ಚಿಂತನೆಯಾಗಿರುವುದನ್ನು ಗಣನೆಗೆ ತೆಗೆದುಕೊಂಡು ಬೇರೆ ರಾಜ್ಯಗಳಲ್ಲಿ ಜಾರಿ ಇರುವ ಮುದ್ರಾಂಕ ಶುಲ್ಕಗಳ ಮಾಹಿತಿಯನ್ನು ಪಡೆದು ಪರಿಷ್ಕರಿಸಲಾಗಿದೆ.

ರಾಜ್ಯದಲ್ಲಿ ರೈತರು ಪಡೆಯುವ ಕೃಷಿ ಸಾಲಕ್ಕೆ ಸಂಬಂಧಿಸಿದ ಅಡಮಾನ ಪತ್ರಗಳಿಗೆ ಸಂಪೂರ್ಣ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳನ್ನು ವಿನಾಯಿತಿಯನ್ನು ದಿನಾಂಕ 03.05.2005ರ ಸರ್ಕಾರದ ಅಧಿಸೂಚನೆಯಲ್ಲಿ ನೀಡಲಾಗಿದೆ.

ರೈತರು 5 ಲಕ್ಷ ಮಿತಿಯೊಳಗಿನ ವ್ಯವಸಾಯೇತರ ಸಾಲಗಳನ್ನು ಅಂಗೀಕೃತ ಹಣಕಾಸು ಸಂಸ್ಥೆಗಳಿಂದ ಪಡೆಯುವ ದಸ್ತಾವೇಜುಗಳಿಗೆ ಸಂಪೂರ್ಣ ಮುದ್ರಾಂಕ ಶುಲ್ಕ, ಮತ್ತು ನೋಂದಣಿ ಶುಲ್ಕಗಳಿಗೆ ವಿನಾಯಿತಿಯನ್ನು ದಿನಾಂಕ: 29.03.2011ರ ಸರ್ಕಾರದ ಅಧಿಸೂಚನೆಯಲ್ಲಿ ನೀಡಲಾಗಿದೆ.

ರೈತರ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಾಗ, ಭೂ ಪರಿಹಾರದ ಹಣದ ಬದಲಾಗಿ, ಅಭಿವೃದ್ಧಿ ಮಾಡಿದ ಜಮೀನನ್ನು ಪರಿಹಾರವಾಗಿ ನೀಡುವ ಸಂದರ್ಭದಲ್ಲಿ ಹಾಗೂ ರೈತರಿಂದ ಜಮೀನನ್ನು ಸ್ವಾಧೀನಪಡಿಸಿಕೊಂಡಾಗ ನೀಡಿದ ಪರಿಹಾರ ಮೊತ್ತಕ್ಕೆ ಮೀರಿದ ಮೊಬಲಗಿನಲ್ಲಿ ರೈತರು ಜಮೀನನ್ನು ಖರೀದಿಸಿದ ಸಂದರ್ಭದಲ್ಲಿ ಬರೆದುಕೊಡುವ ದಸ್ತಾವೇಜುಗಳಿಗೆ ವಿಧಿಸಲಾಗುವ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕಗಳಲ್ಲಿ ಸಂಪೂರ್ಣ ವಿನಾಯಿತಿಯನ್ನು ದಿನಾಂಕ: 09.03.2011 ರ ಸರ್ಕಾರದ ಅಧಿಸೂಚನೆಯಲ್ಲಿ ನೀಡಲಾಗಿದೆ.

ಕಂಇ 11 ಎಂಎನ್ ಎಂಯು 2024

ಕೃಷ್ಣ ಬೈರೇಗೌಡ
**ಕಂದಾಯ ಸಚಿವರು**